ಇದೇ ಪ್ರೇಮವೇ? ಇದ್ದರೂ ಇದ್ದೀತು ಎನಿಸಿತ್ತು. ಅದನ್ನು ಆಗ ನಡೆದೊಂದು ಘಟನೆ ಪುಷ್ಟೀಕರಿಸಿತ್ತು. ಅಂದಿನ ದಿನಗಳಲ್ಲಿ ಉಗಾರದಲ್ಲಿ ಸದಾ ನೀರಿಗೆ ಬರವೇ. ಆಳುಗಳೊಂದಿಗೆ ಮಂಚಿಯೂ ಸೇರಿ ಬಳಕೆಯ ನೀರು ಹೊತ್ತು ತಂದರೆ ಮನೆಗೆ ಕುಡಿಯುವ ನೀರನ್ನು ನಾವೇ ತರಬೇಕಿತ್ತು. ನಿತ್ಯ ಸಂಜೆ ಮಂಚಿಯೊಂದಿಗೆ ನಾನೇ ಹೋಗುತ್ತಿದ್ದೆ. ಒಮ್ಮೆ ಅಕಸ್ಮಾತ್ ಒಬ್ಬಳೇ ಹೋಗಿ ನದಿತೀರದಲ್ಲಿ ನಿಂದೆ. ಕೊಡ ನೀರಿಗೆ ಮುಟ್ಟಿಸುವ ಮುನ್ನ ಶಾಂತವಾದ ನೀರಿನಲ್ಲಿ ನನ್ನ ಪ್ರತಿಬಿಂಬ ಮೂಡಿತ್ತು. ಅಲ್ಲಿ ಮುಖದ ಕಲೆಯೂ ದೊಡ್ಡದಾಗೇ ಗೋಚರಿಸಿತು. ಮನ ಸಿಡಿಮಿಡಿಗೊಂಡಿತು. ಇದರಿಂದಾಗೇ ನನ್ನ ಸೌಂದರ್ಯ ಮುಕ್ಕಾಗಿರುವುದು ಎನಿಸಿ ಅದನ್ನು ಕೆರೆದೆ. "ಊಹ್ಞೂಂ... ಅದು ಇದ್ದದ್ದಕ್ಕ ನಿನ್ನ ಮಾರಿ ಅಷ್ಟು ಛಂದ ಕಾಣಸ್ತದ. ದೇವರು ಅಷ್ಟು ಧೊಡ್ಡ ದೃಷ್ಟಿಚಿಕ್ಕಿ ಇಟ್ಟು ಕಳಿಸ್ಯಾನ" ಎಂಬ ಧ್ವನಿ ಹಿಂದಿನಿಂದ ತೂರಿ ಬಂತು. ಗಾಬರಿಯಿಂದ ತಿರುಗಿ ನೋಡಿದೆ. ಮರದ ನೆರಳಿನಲ್ಲಿ ನಸುನಗುತ್ತ ನಿಂತಿದ್ದ ಶಂಕರ. ಒಂದು ಕ್ಷಣ ಮೈ 'ಝುಂ' ಎಂದಿತ್ತು. ಮನ ಸಂತೋಷದಿಂದ ಅರಳಿತ್ತು. ಮೊದಲ ಬಾರಿಗೆ ಯಾರೋ ಪರಪುರುಷ ನನ್ನ ದೋಷದೊಂದಿಗೆ ನನ್ನನ್ನು ಹೊಗಳಿದ್ದ. ಅದನ್ನೇ ಧನಾತ್ಮಕ ಅಂಶವನ್ನಾಗಿಸಿದ್ದ. ಏನು ಮಾಡಲೂ ತೋಚದೇ ನಾಚಿ ನಸುನಗುತ್ತ ಗಲಿಬಿಲಿಯಿಂದ ನೀರು ತುಂಬಿಕೊಂಡು ಮನೆಗೆ ಮರಳಿದ್ದೆ.

ಮುಂದೆ ನಮ್ಮ ಭೇಟಿ ಮಾಮೂಲಾಗಿತ್ತು. ಹೆಚ್ಚಾಗಿ ಮಂಚಿ ನನ್ನ ಜೊತೆ ಇದ್ದೇ ಇರುತ್ತಿದ್ದಳು. ಆಗ ನನ್ನೊಂದಿಗೆ ನೇರವಾಗಿ ಮಾತನಾಡದೇ ಮಂಚಿಯೊಡನೆ ಮಾತನಾಡುತ್ತ ಸುತ್ತಿ ಬಳಸಿ ಹೇಳಬೇಕಾದದ್ದನ್ನು ಹೇಳುತ್ತಿದ್ದ.

'ಗೆಳತ್ಯಾರ ಜೋಡಿ ಮಾಡೇದ ಮೋಡಿ, ಮನಸು ಕದ್ದಕೊಂಡು ಹೊಂಟಾಳ ಓಡಿ' ಎಂದು ರಾಗವಾಗಿ ಜನಪದ ಗೀತೆ ಹಾಡುತ್ತಿದ್ದ. ಅದರ ಇಂಗಿತ ನನಗೆ ತಿಳಿಯುತ್ತಿರಲಿಲ್ಲವೇ? ಚೆನ್ನಾಗಿ ಅರ್ಥವಾಗುತ್ತಿತ್ತು. ರಾತ್ರಿ ಕನಸಿನಲ್ಲಿ ನೂರು ಹೂವುಗಳು ಶಂಕರನ ಹೆಸರಿನಲ್ಲಿ ಅರಳುತ್ತಿದ್ದವು. ಆದರೂ ನಾನು ಯೋಚಿಸಿದೆ. ಶಂಕರ ಒಳ್ಳೆಯ ಹುಡುಗನೇ. ಊರಿನ ಪಕ್ಕವೇ ಐವತ್ತೆಕರೆ ಭೂಮಿ ಉಳ್ಳವ. ತಂದೆ ತಾಯಿ ಇಲ್ಲದವನನ್ನು ಅವನ ಅಜ್ಜಿಯೇ ಸಾಕಿ ಬೆಳೆಸಿದ್ದಳು. ಚಿಕ್ಕಪ್ಪನ ಫ್ಯಾಕ್ಟರಿ ಬೆಳಗಾವಿಯಲ್ಲಿತ್ತು. ಎಂಥದ್ದೋ ಗೊತ್ತಿಲ್ಲ. ಅದಕ್ಕೂ ಆಗಾಗ ಹೋಗಿಬರುತ್ತಿದ್ದ. ನಾವು ನೀರಿಗೆ ಹೋಗುವ ದಾರಿಯಲ್ಲೇ ಅವನ ಮನೆ. ಆದರೆ, ನಮ್ಮಿಬ್ಬರ ಮಧ್ಯೆ ಜಾತಿಯ ಕಂದಕ ದೊಡ್ಡದಾಗಿತ್ತು. ವಿಷಯ ಹೊರಗೆ ಗೊತ್ತಾದರೆ ಅವನಿಗೂ ಕಂಟಕವೇ. ಮಂಚಿಯೊಂದಿಗೆ ಚರ್ಚಿಸಿದೆ. "ಇದು ಸಾಧ್ಯಾನ ಇಲ್ಲ" ಎಂದಾಗ ಅವಳೂ ಮುಖ ಬಾಡಿಸಿಕೊಂಡು, "ಖರೆ... ಅಂವಾ ನಿನ್ನ ಭಾಳ ಪ್ರೀತಿಸ್ತಾನ" ಎಂದಿದ್ದಳು. ಆದರೆ, ದೇಶಪಾಂಡೆಯವರ ಕೋಟೆ ಬಲು ಭದ್ರವಾಗಿತ್ತು. ದಾಟುವ, ಹಾರುವ ಪ್ರಮೇಯವೇ ಇರಲಿಲ್ಲ. ಮನದಲ್ಲೇ ಮಥಿಸಿ ಮಥಿಸಿ ಕೊನೆಗೊಮ್ಮೆ ಮೌನ ಮುರಿದೆ.

ಅಂದು ನೀರಿಗೆ ಒಬ್ಬಳೇ ಹೋಗಿದ್ದೆ. ಶಂಕರ ಬಂದಿದ್ದ. ಸುತ್ತ ಯಾರೂ ಇಲ್ಲದ ಸಂಜೆ. "ಶಂಕರಾ, ನಮ್ಮಿಬ್ಬರ ಸಂಬಂಧ ಆಗಿ ಹೋಗೊವಂಥಾದ್ದಲ್ಲ. ಸುಮ್ಮನ ಇಬ್ಬರೂ ಕನಸು ಕಾಣೋದು ಬ್ಯಾಡ. ನೀ ಓದಿನ ಕಡೆ ಲಕ್ಷ್ಯ ಕೊಡು" ಎಂದು ಸ್ಪಷ್ಟವಾಗಿ ಹೇಳಿದ್ದೆ. ಅವನ ಮುಖ ಕಳೆಗುಂದಿದ್ದು ಆ ಸಂಜೆಗತ್ತಲಲ್ಲೂ ನನಗೆ ಕಂಡಿತ್ತು. "ಇಬ್ಬರೂ ದೂರ ಎಲ್ಲರೆ ಪುಣೆ, ಮುಂಬೈಕ್ಕ ಹೋದರ ಯಾರಿಗೂ ಗೊತ್ತಾಗೂದಿಲ್ಲ. ಜಾತಿ ಪ್ರಶ್ನೆನ ಬರೂದುಲ್ಲ. ವಿಚಾರ ಮಾಡು. ಹಿಂಗ ಒಮ್ಮಿಂದೊಮ್ಮೆಲೆ ಇಲ್ಲ ಅನಬ್ಯಾಡ" ಎಂದು ಅಂಗಲಾಚಿದ್ದ. ನನ್ನದು ಅದೇ ಖಡಕ್ ಧೋರಣೆ. "ಸಾಧ್ಯಾನ ಇಲ್ಲ ಶಂಕರ. ಅವ್ವ, ಅಪ್ಪ, ಈ ಸಮಾಜ, ಜಾತಿ ಅನ್ನೋ ಬೇಲಿ ನಮ್ಮನ್ನ ಬದುಕಲಿಕ್ಕೆ ಬಿಡೂದುಲ್ಲ. ನೀ ಮದವಿ ಮಾಡಕೊ. ನಿನಗ ಛೊಲೊ ಹೆಂಡ್ತಿ ಸಿಗಲಿ" ಎಂದು ಹಾರೈಸಿದ್ದೆ. ನನ್ನಿಂದ ಅಂಥ ಉತ್ತರ ಪಡೆದವ ನಿರಾಶನಾಗಿ, "ನಿನಗೂ ಛೊಲೊ ಗಂಡ ಸಿಗಲಿ" ಎಂದು ತಿರುಗಿ ನೋಡದೇ ನಡೆದಿದ್ದ. ಪ್ರೀತಿಯ